೨. ೨೩, ೨೪.) ಪೌಲನು ಸೆರೆಯಲ್ಲಿ ಇದ್ದದ್ದನ್ನೂ ಎಪಫ್ರೊದೀತನು ವ್ಯಾಧಿಯಾಗಿದ್ದದ್ದನ್ನೂ ಫಿಲಿಪ್ಪಿ ಸಭೆಯವರು ಕೇಳಿ, ಬಹಳ ದುಃಖ ಪಟ್ಟರೆಂದೂ, ದ್ರವ್ಯಸಹಾಯ ಮಾಡಿದರೆಂದೂ ಹೇಳಿರುವದರಿಂದ, (೪. ೧೦—೧೮; ೨. ೨೫—೩೦.) ಈ ಪತ್ರಿಕೆ ಪೌಲನು ಮೊದಲನೇ ಸಾರಿ ಸೆರೆಯವನಾಗಿದ್ದ ಕಾಲದ ಕಡೆಯಲ್ಲಿ ೬೩ನೇ ವರುಷದಲ್ಲಿ ಬರಿಯಲ್ಪಟ್ಟದ್ದೇ ಹೊರ್ತು, ಅದಕ್ಕಿಂತ ಮುಂಚೆ ಬರೆಯಲ್ಪಡಲಿಲ್ಲವೆಂದು ನಿಶ್ಚಯಿಸಬೇಕು.

ಬೇರೆ ಪತ್ರಿಕೆಗಳಲ್ಲಿರುವ ಪ್ರಕಾರ ಈ ಪತ್ರಿಕೆಯಲ್ಲಿ ಸುಳ್ಳು ಬೋಧನೆಗಳನ್ನು ಖಂಡಿಸಿ ಕ್ರಿಸ್ತಮಾರ್ಗದ ಸತ್ಯಗಳನ್ನು ಸ್ಥಾಪಿಸ ತಕ್ಕ ಕಟ್ಟಳೆಗಳಾದರೂ, ಸಭೆಯವರ ತಪ್ಪುಗಳನ್ನು ತೋರಿಸುವ ನ್ಯಾಯಗಳಾದರೂ ಒಂದೂ ಇಲ್ಲ. ಎಲ್ಲಾ ಪ್ರೀತಿಯ ಮನಸ್ಸಿನಿಂದ ಹೊರಡುವ ಆದರಣೆಯಾದ ವಾಕ್ಯಗಳಾಗಿರುತ್ತವೆ. ಪೌಲನು ತನ್ನ ಸ್ಥಿತಿಯನ್ನು ಕುರಿತು ಅವರಿಗೆ ಆದರಣೆ ಹೇಳಿ, ಎಲ್ಲಾ ಉಪದ್ರಗಳನ್ನೂ ತಾಳ್ಮೆಯಿಂದ ಸಹಿಸಬೇಕೆಂದೂ, ಎಲ್ಲಾ ಸದ್ಗುಣಗಳಲ್ಲಿ ಹೆಚ್ಚೆಚ್ಚಾಗಿ ಬೆಳಿಯಬೇಕೆಂದೂ, ಮಹಾ ಪ್ರೀತಿಯಿಂದ ಬುದ್ಧಿ ಹೇಳುತ್ತಾನೆ.

ಈ ಪತ್ರಿಕೆಯನ್ನು ನಾಲ್ಕು ಭಾಗಗಳಾಗಿ ವಿಭಾಗಿಸಬಹುದು.

I. ಪೀಠಿಕೆ. (೧. ೧—೧೧.)

II. ಪೌಲನನ್ನು ಕುರಿತ ಸಂಗತಿಗಳು, ಬುದ್ಧಿಬೋಧನೆಗಳು. (೧. ೧೨—೨. ೩೦. ವರೆಗೂ.)

III. ಕೇಡಿಗೆ ತೊಲಗ ತಕ್ಕ ಎಚ್ಚರಿಕೆಗಳು. (೩. ೧—೪. ೯. ವರೆಗೂ.)

VI. ಮಾಡಿದ ಮೇಲನ್ನರಿತದ್ದಕ್ಕೆ ತಕ್ಕ ಉಪಚರಣೆಯಾದ ವಂದನೆಗಳು. (೪. ೧೦—೨೩. ವರೆಗೂ.)

---

# THE EPISTLE OF PAUL THE APOSTLE TO THE PHILIPPIANS.

## ಅಪೊಸ್ತಲನಾದ ಪೌಲನು
# ಫಿಲಿಪ್ಪಿಯರಿಗೆ ಬರೆದ ಪತ್ರಿಕೆ.

ಪೀಠಿಕೆ, ಫಿಲಿಪ್ಪಿ ಸಭೆಯವರನ್ನು ಪ್ರೀತಿಯಾಗಿ ನೆನಸಿ ಕೊಂಡು, ಅವರ ಆತ್ಮವೃದ್ಧಿಗೋಸ್ಕರ ಪ್ರಾರ್ಥಿಸಿದ್ದು.

1. ಯೇಸು ಕ್ರಿಸ್ತನ ದಾಸರಾದ [1]ಪೌಲನೂ [2]ತಿಮೊಥೆಯನೂ, ಫಿಲಿಪ್ಪಿಯಲ್ಲಿರುವಂಥ, ಕ್ರಿಸ್ತ ಯೇಸುವಿ
೨ ನಲ್ಲಿ ಪರಿಶುದ್ಧರಾದವರೆಲ್ಲರಿಗೆ, ಅಧ್ಯಕ್ಷರಿಗೂ [3]ಸೇವಕರಿಗೂ ಸಹ— ನಮ್ಮ ತಂದೆಯಾದ ದೇವರಿಂದಲೂ
ಕರ್ತನಾದ ಯೇಸು ಕ್ರಿಸ್ತನಿಂದಲೂ, ನಿಮಗೆ ಕೃಪೆಯೂ ಸಮಾಧಾನವೂ ಆಗಲಿ.
೩, ೪ ನಿಮ್ಮನ್ನು [4]ಜ್ಞಾಪಕ ಮಾಡಿ ಕೊಳ್ಳುವಾಗೆಲ್ಲಾ ಸುವಾರ್ತೆಗಾಗಿ ಮೊದಲನೇ ದಿವಸದಿಂದ ಈಗಿನ
೫ ವರೆಗೂ ನಿಮಗಿದ್ದ [5]ಅನ್ಯೋನ್ಯಕ್ಕೋಸ್ಕರ ನನ್ನ ದೇವರಿಗೆ ಸ್ತೋತ್ರ ಮಾಡಿ, ಯಾವಾಗಲೂ ನಿಮ್ಮೆ
೬ ಲ್ಲರಿಗೋಸ್ಕರ ಮಾಡುವ ಎಲ್ಲಾ ವಿಜ್ಞಾಪನೆಯಲ್ಲಿ, ಸಂತೋಷದಿಂದ ವಿಜ್ಞಾಪನೆ ಮಾಡುತ್ತೇನೆ. ಒಳ್ಳೇ
ಕೆಲಸವನ್ನು ನಿಮ್ಮಲ್ಲಿ ಆರಂಭಿಸಿದವನು, [6]ಯೇಸು ಕ್ರಿಸ್ತನ ದಿನದ ಮಟ್ಟಿಗೂ, ಅದನ್ನು ಪೂರೈಸುವನೆಂಬುವ
೭ ದನ್ನೇ ನಂಬಿ ಕೊಂಡಿದ್ದೇನೆ. ಹ್ಯಾಗಂದರೆ ನನ್ನ ಬಂಧಗಳಲ್ಲಿಯೂ, ಸುವಾರ್ತೆಯ ಪ್ರತ್ಯುತ್ತರದಲ್ಲಿಯೂ,
ಸ್ಥಾಪನೆಯಲ್ಲಿಯೂ, ನಾನು ನಿಮ್ಮೆಲ್ಲರನ್ನು ಕೃಪೆಯಲ್ಲಿ ನನ್ನ ಸಂಗಡ ಪಾಲುಗಾರರೆಂದು [7]ನನ್ನ ಹೃದಯ

---

1. ಪೌಲನು ಫಿಲಿಪ್ಪಿ ಸಭೆಯನ್ನೂ ಅದರ ಊಳಿಗದವರನ್ನೂ ದೇವರ ಹೆಸರಿನಿಂದ ಆಶೀರ್ವದಿಸಿದ ತರುವಾಯ (೧, ೨. ವ.) ಸಭೆಯವರ ಭಕ್ತಿಯನ್ನು ಕುರಿತು ದೇವರಿಗೆ ಮೆಚ್ಚಿಕೆಯಾಗಿ ಮಾತಾಡಿ, (೩—೭. ವ.) ಅವರು ಸಕಲ ಆತ್ಮನ ವರಗಳಲ್ಲಿ ಹೆಚ್ಚೆಚ್ಚಾಗಿ ವೃದ್ಧಿ ಹೊಂದುವ ಹಾಗೆ ತನಗಿರುವ ಅಪೇಕ್ಷೆಯನ್ನು ತಿಳಿಸುತ್ತಾನೆ. (೮—೧೧. ವ.)

2. ತಿಮೊಥೆಯನು ಫಿಲಿಪ್ಪಿ ಸಭೆಯವರಿಗೆ ಪರಿಚಿತಿಯುಳ್ಳವನಾಗಿಯೂ, ಆ ಕಾಲದಲ್ಲಿ ಪೌಲನ ಸಂಗಡಲಿದ್ದ ಜತೆಗಾರನಾಗಿಯೂ ಇದ್ದನು. ಇದು ಪ್ರಿಯ ಸಭೆಗೆ ಬರೆಯಲ್ಪಟ್ಟ ಪತ್ರಿಕೆಯಾದದರಿಂದ, ಇದರಲ್ಲಿ ಅಪೊಸ್ತಲನೆಂದು ತನ್ನ ಉದ್ಯೋಗದ ಹೆಸರನ್ನು ಹೇಳದೆ, ಯೇಸು ಕ್ರಿಸ್ತನ ದಾಸರೆಂದು ಹೇಳುತ್ತಾನೆ.

3. ಫಿಲಿಪ್ಪಿ ಸಭೆಯಲ್ಲಿ ಅಧ್ಯಕ್ಷರು ಸೇವಕರು ಎಂಬ ಎರಡು ವಿಧವಾದ ಉದ್ಯೋಗಸ್ಥರು ಮಾತ್ರ ಇದ್ದರೆಂದು ತೋರುತ್ತದೆ. (೧ ತಿಮೊ. ೩. ೧—೧೩. ವಚನಗಳ ವ್ಯಾಖ್ಯಾನ ನೋಡ ಬೇಕು.)

4. ಅವರನ್ನು ಜ್ಞಾಪಕ ಮಾಡಿ ಕೊಳ್ಳುವಾಗಲೆಲ್ಲಾ ಪೌಲನು ದೇವರನ್ನು ಸ್ತುತಿಸ ತಕ್ಕ ಒಳ್ಳೇ ಕಾರ್ಯಗಳೇ ಅವನ ಆಲೋಚನೆಯಲ್ಲಿದ್ದವು.

5. ಸುವಾರ್ತೆಯ ಮಾರ್ಗವು ಅಭಿವೃದ್ಧಿಯಾಗುವ ಉದ್ದಿಶ್ಯ ಅವರು ಉದಾರವಾಗಿ ದ್ರವ್ಯಸಹಾಯ ಮಾಡಿದ್ದರಿಂದಲೂ, ಕ್ರಿಸ್ತಮಾರ್ಗಕ್ಕೆ ತಕ್ಕ ಹಂಗುಗಳನ್ನು ವೈರಾಗ್ಯದಿಂದ ಈಡೇರಿಸಿದ್ದರಿಂದಲೂ, ಅವರು ಅದಕ್ಕೆ ಒಡಂಬಟ್ಟು ಅನ್ಯೋನ್ಯವುಳ್ಳವರಾಗಿದ್ದರು. (೪. ೧೪—೧೬.)

6. ಯೇಸು ಕರ್ತನಿಗೆ ಸೇವೆ ಮಾಡುವದಕ್ಕೆ ಅವರು ತಮ್ಮನ್ನೂ ತಮ್ಮ ದ್ರವ್ಯವನ್ನೂ ಆತನಿಗೆ ಕಾಣಿಕೆಯಾಗಿ ಅರ್ಪಿಸಿದ್ದನ್ನು ಯೋಚಿಸುವಾಗ, ಅವರಲ್ಲಿ ರಕ್ಷಣೆಯಾದ ಸತ್ಕ್ರಿಯೆ ಆರಂಭವಾಗಿದ್ದದಕ್ಕೆ ಅದು ದೃಷ್ಟಾಂತವಾಗಿಯೂ, ಆತನು ಎರಡನೇ ಸಾರಿ ಪ್ರಸನ್ನನಾಗುವಾಗ ಸಂಪೂರ್ಣವಾಗುವ ಮಟ್ಟಿಗೂ ಅವರಲ್ಲಿ ಹೆಚ್ಚೆಚ್ಚಾಗಿ ವೃದ್ಧಿ ಹೊಂದುವದಕ್ಕೆ ಸಂಚಕಾರದ ಹಾಗೆಯೂ ಇತ್ತು. (೬. ವ.; ೩. ೨೦, ೨೧.) ಅವರ ಅಜ್ಞಾನಾಂಧಕಾರವನ್ನು ನಿವರ್ತಿ ಮಾಡಿ, ಅವರ ಹೃದಯದಲ್ಲಿ ಸತ್ಯದ ಬೆಳಕನ್ನು ಹುಟ್ಟಿಸಿದ ಕ್ರಿಸ್ತನು ತನ್ನ ಮಹಿಮಾಸನದಲ್ಲಿ ಆಸೀನನಾಗುವ ದೊಡ್ಡ ದಿವಸದಲ್ಲಿ ಅದು ಪೂರ್ಣವಾಗಿ ತೋರುವಂತೆ ಮಾಡುವನು.

7. ಸುವಾರ್ತೆಯ ನಿಮಿತ್ತ ಪೌಲನು ಪ್ರಯಾಸ ಪಡಲೂ, ಉಪದ್ರ ಪಡಲೂ ತಕ್ಕದ್ದಾಗಿ, ದೇವರು ಅನುಗ್ರಹಿಸಿದ ಕೃಪೆಯಲ್ಲಿ ಫಿಲಿಪ್ಪಿ ಸಭೆಯವರು ಸಹ ಪಾಲುಗಾರರಾಗಿರುವದರಿಂದ ಅವರ ಸಂಗಡ ಅವನು ಪ್ರೀತಿ ಎಂಬ ಬಂಧಗಳಿಂದ ಕಟ್ಟಲ್ಪಟ್ಟವನಾಗಿದ್ದನು. ಈ ಐಕ್ಯವು ಅವರು ದೇವರ ಮಕ್ಕಳೆಂದು ದೃಷ್ಟಾಂತ ಪಡಿಸ ತಕ್ಕದ್ದಾಗಿತ್ತು.

ಮನಸ್ಸಿನಿಂದ ಸುವಾರ್ತೆಯ ವಿಶ್ವಾಸಕ್ಕೋಸ್ಕರ ಕೂಡ ಹೋರಾಡುತ್ತೀರೆಂದೂ, ಯಾವದರಲ್ಲ್ಯಾದರೂ
ಶತ್ರುಗಳಿಂದ ಹೆದರಿಸಲ್ಪಡುವದಿಲ್ಲವೆಂದೂ, ನಾನು ನಿಮ್ಮನ್ನು ಕುರಿತು ಕೇಳುವ ಹಾಗೆ, ಸುವಾರ್ತೆಗೆ ತಕ್ಕ
೨೮ ಪ್ರಕಾರ ಮಾತ್ರ [1]ನಡೆದು ಕೊಳ್ಳಿರಿ. [2]ಅದು ಅವರಿಗೆ ನಾಶನಕ್ಕಾಗಿಯೂ, ನಿಮಗೆ ರಕ್ಷಣೆಗಾಗಿಯೂ,
೨೯ ದೇವರಿಂದಲೇ ಗುರುತಾಗಿದೆ. ಯಾಕಂದರೆ ಕ್ರಿಸ್ತನಿಗೋಸ್ಕರ ಅವನಲ್ಲಿ ವಿಶ್ವಾಸವಿಡುವದಕ್ಕೆ ಮಾತ್ರವಲ್ಲ,
೩೦ ಅವನಿಗೋಸ್ಕರ ಶ್ರಮೆ ಪಡುವದಕ್ಕೂ ನೀವು ಕೃಪೆಯನ್ನು [3]ಹೊಂದಿದ್ದೀರಿ. ನೀವು [4]ನನ್ನಲ್ಲಿ ನೋಡಿದಂಥ,
ಈಗ ನನ್ನಲ್ಲಿ ಕೇಳುವಂಥ, ಅದೇ ಹೋರಾಟ ನಿಮಗುಂಟಾಗಿದೆ.

2. ಆದದರಿಂದ, ಕ್ರಿಸ್ತನಲ್ಲಿರುವ ಯಾವ [5]ಆದರಣೆಯೂ, ಯಾವ ಪ್ರೀತಿಯ ಸಂತೈಸುವಿಕೆಯೂ, ಯಾವ
೨ ಆತ್ಮದ ಅನ್ಯೋನ್ಯವೂ, ಯಾವ ಅಂತಃಕರಣಗಳೂ, ಕನಿಕರಗಳೂ ಇದ್ದರೆ, ಒಂದೇ ಮನಸ್ಸಾಗಿ, ಒಂದೇ
ಪ್ರೀತಿ ಉಂಟಾಗಿ, ಒಂದೇ ಜೀವವಾಗಿಯೂ ಏಕ ಮನಸ್ಸುಳ್ಳವರಾಗಿಯೂ ಇದ್ದು, ನನ್ನ ಸಂತೋಷವನ್ನು
೩ ಪೂರೈಸಿರಿ. [6]ಜಗಳದಿಂದಾಗಲಿ, ಡಂಭಾಚಾರದಿಂದಾಗಲಿ, ಏನೂ ನಡಿಸದೆ, ದೀನ ಮನಸ್ಸಿನಿಂದ ಒಬ್ಬರ
೪ ನ್ನೊಬ್ಬರು ತಮಗಿಂತ ಶ್ರೇಷ್ಠರೆಂದು ಎಣಿಸಿರಿ. ಒಬ್ಬೊಬ್ಬನು ತನ್ನವುಗಳನ್ನಲ್ಲ, ಬೇರೊಬ್ಬರವುಗಳನ್ನು ಸಹ
ಒಬ್ಬೊಬ್ಬನು ನೋಡಲಿ.
೫, ೬ [7]ಕ್ರಿಸ್ತ ಯೇಸುವಿನಲ್ಲಿಯೂ ಇದ್ದ ಮನಸ್ಸೇ ನಿಮ್ಮಲ್ಲಿ ಇರಲಿ. ಅವನು ದೇವರ [8]ರೂಪದಲ್ಲಿದ್ದು, ದೇ
೭ ವರಿಗೆ ಸಮಾನವಾಗಿರುವದು [9]ಕೊಳ್ಳೆ ಎಂದು ಎಣಿಸದೆ, ದಾಸನ ರೂಪ ತಕ್ಕೊಂಡು, ಮನುಷ್ಯರ ಹೋ
೮ ಲಿಕೆಯಾದವನಾಗಿ, ತನ್ನನ್ನು ಬರಿದು ಮಾಡಿ ಕೊಂಡನು. ಮತ್ತು ಆಕಾರದಲ್ಲಿ ಮನುಷ್ಯನಾಗಿ ಕಾಣ

ತಾನೇ ಶೀಘ್ರವಾಗಿ ಬರ ಯೋಚಿಸಿದ್ಧೇನೆಂದೂ ಹೇಳಿ, (೨೪. ವ.) ಅವರು ಬಹಳ ಪ್ರೀತಿ ಮಾಡಿದ ಎಪಫ್ರೊದೀತನನ್ನು ಸಂಗಡಲೇ ಕಳುಹಿಸಿದನು. (೨೫—೩೦. ವ.)

1. ನಡೆದು ಕೊಳ್ಳಿರಿ ಎಂಬುವದಕ್ಕೆ ಪಟ್ಣವಾಸದ ಸ್ವತಂತ್ರದಿಂದ ನಡೆದು ಕೊಳ್ಳಿರೆಂಬುವದು ಮೂಲ ಭಾಷೆಯ ಅಭಿಪ್ರಾಯವು. (೩. ೨೦. ಅಪೊ. ಕ್ರಿ. ೨೩. ೧. ವಚನಗಳ ವ್ಯಾಖ್ಯಾನ ನೋಡ ಬೇಕು.) ಈ ಪರಮ ಪಟ್ಣವಾಸದ ಸ್ವಾತಂತ್ರ್ಯವು ಸುವಾರ್ತೆಯಿಂದ ಬಂದ ಕಾರಣ ಅವರು ಅದಕ್ಕೆ ತಕ್ಕ ಹಾಗೆ ನಡಿಯ ಬೇಕು.

2. ಫಿಲಿಪ್ಪಿ ಸಭೆಯವರು ಸತ್ಯಮಾರ್ಗದಲ್ಲಿ ಸ್ಥಿರವಾಗಿ ನಡಿಯುವದು, ಶತ್ರುಗಳು ಕಡೆಯಲ್ಲಿ ನಾಶವಾಗುವರೆಂಬುವದಕ್ಕೂ, ಭಕ್ತರಾದ ಅವರು ಸೌಖ್ಯ ಹೊಂದುವರೆಂಬುವದಕ್ಕೂ ದೇವರಿಂದ ಅವರಿಗೆ ಕೊಡಲ್ಪಟ್ಟ ಸಾಕ್ಷಿಯಾಗಿತ್ತು.

3. ಕ್ರಿಸ್ತನಿಗಾಗಿ ಅವರು ಸಹಿಸಿದ ಕಷ್ಟಗಳು ಅವರ ಭಕ್ತಿಗೂ, ದೇವರು ಅವರ ಮೇಲಿಟ್ಟ ಮಹಾ ಪ್ರೀತಿಗೂ ಸಾಕ್ಷಿಯಾಗಿತ್ತು. (೬. ವ. ಅಪೊ. ಕ್ರಿ. ೫. ೪೧.)

4. ಪೌಲನು ಫಿಲಿಪ್ಪಿ ಪಟ್ಣದಲ್ಲಿದ್ದಾಗ, ಅವನಿಗೆ ಸಂಭವಿಸಿದ ಉಪದ್ರವನ್ನು ಅವರು ಕಣ್ಣಾರ ಕಂಡರು. (ಅಪೊ. ಕ್ರಿ. ೧೬. ೧೯—೨೪.) ಈಗ ರೋಮಪುರಿಯಲ್ಲಿ ಅವನಿಗುಂಟಾಗಿದ್ದ ಉಪದ್ರವನ್ನು ಅವರು ಕಿವಿಯಿಂದ ಕೇಳಿದರು. ಆದದರಿಂದ ಅವರು ವಹಿಸಿದ ಉಪದ್ರವೆಂಬ ಶಿಲುಬೆಯು ಪೌಲನು ವಹಿಸಿದ ಶಿಲುಬೆಯೇ ಹೊರ್ತು ಬೇರೆ ಅಲ್ಲ. ಈ ಶಿಲುಬೆ ವಹಿಸುವವರಿಗೆ ಜೀವದ ಕಿರೀಟ ಉಂಟು.

5. ಕರ್ತನೂ ವಿಮೋಚಕನೂ ತನ್ನ ದಾಸರಿಗೆ ಒಳ್ಳೇ ಮಾದ್ರಿ ತೋರಿಸಿದವನೂ ಆದ ಕ್ರಿಸ್ತನಲ್ಲಿದ್ದ ಸಂಪೂರ್ಣ ಆದರಣೆಯನ್ನು ಆಶಿಸಿ ನಡಿಯುವದೇ ಉತ್ತಮ ಭಕ್ತರ ಲಕ್ಷಣವು. ಪ್ರಿಯರಾದ ಅವರೆಲ್ಲರೂ ಒಂದೇ ಮನಸ್ಸೂ ಏಕ ಚಿಂತೆಯೂ ಉಳ್ಳವರಾಗಿ ನಡಿಯುವದನ್ನು ನೋಡುವದೇ ದೇವರ ಸೇವಕರಿಗೆ ಸಂತೋಷವು.

6. ಪ್ರೀತಿಗೂ ಐಕ್ಯಕ್ಕೂ ಜಗಳವೂ ಗರ್ವವೂ ಸರಿ ಬೀಳದು. ಸ್ವಪ್ರಯೋಜನವನ್ನು ಹಗೆ ಮಾಡಿ, ಅನ್ಯರ ಪ್ರಯೋಜನವನ್ನು ಅಪೇಕ್ಷಿಸಿ, ತಾಳ್ಮೆಯಾಗಿಯೂ ಮಿತಿಯಾಗಿಯೂ ನಡಿಯುವದೇ ಉತ್ತಮ ವಿಧವು. ಪ್ರೀತಿಯು ಅನ್ಯರ ತಪ್ಪುಗಳನ್ನು ಮರೆ ಮಾಡಿ, ಅವರ ಸದ್ಗುಣಗಳನ್ನು ಪ್ರಕಟ ಮಾಡುವದು. ಆದದರಿಂದ ತಮ್ಮ ತಪ್ಪುಗಳನ್ನು ತಿಳುಕೊಂಡವರು ಅನ್ಯರನ್ನು ತಮಗಿಂತ ಶ್ರೇಷ್ಠರೆಂದು ಎಣಿಸುವರು.

7. ಸ್ವಂತ ಮಹಿಮೆಯನ್ನು ಅಲಕ್ಷ್ಯ ಮಾಡಿ, ಮನುಷ್ಯರ ಪ್ರಾಣವಿಮೋಚನೆಗಾಗಿ ತನ್ನ ಪ್ರಾಣವನ್ನು ಕೊಟ್ಟು, ಅನ್ಯರ ಪ್ರಯೋಜನವನ್ನು ಅಪೇಕ್ಷಿಸಿದಂಥ ಕ್ರಿಸ್ತನಲ್ಲಿ ಪ್ರಕಾಶಿಸಿದ ಶ್ರೇಷ್ಠ ಗುಣಗಳು ಆತನ ದಾಸರಲ್ಲಿಯೂ ಪ್ರಕಾಶಿಸ ಬೇಕು.

8. ದೇವರ ರೂಪದಲ್ಲಿದ್ದನೆಂಬುವದು ಕ್ರಿಸ್ತನ ಅನಾದಿತ್ವವನ್ನು ಸೂಚಿಸುತ್ತದೆ. ದೇವರ ರೂಪವೆಂಬುವದು ಸಮಸ್ತ ದೈವ ಲಕ್ಷಣಗಳುಳ್ಳವನಾಗಿದ್ದನೆಂಬುವದನ್ನು ತೋರಿಸುತ್ತದೆ.

9. ಕ್ರಿಸ್ತನು ದೇವರಿಗೆ ಸಮಾನನಾಗಿದ್ದಾನೆಂಬ ಸತ್ಯವು ನ್ಯಾಯವಾದದ್ದೇ ಹೊರ್ತು, ಬಲಾತ್ಕಾರವಾಗಿ ಕೊಳ್ಳೆ ಮಾಡಿದ ವಸ್ತುವಲ್ಲ. ದೇವಲಕ್ಷಣವೂ ಮಹಿಮೆಯೂ ಆತನಿಗೆ ಸ್ವಂತವೇ. (ಯೋಹಾ. ೧. ೧೬; ೧೭. ೫.) ಅದಾಗ್ಯೂ ಆತನು ತನ್ನ ಮಹಿಮೆಯನ್ನು ತೊರೆದು, ತನ್ನನ್ನು ಬರಿದು ಮಾಡಿ ಕೊಂಡನು. ಆತನು ತನ್ನ ದೈವತ್ವವನ್ನಲ್ಲ ದೈವಮಹಿಮೆಯನ್ನು ತೊರೆದು, ದಾಸನ ರೂಪ ತಕ್ಕೊಂಡು ಮನುಷ್ಯರ ಹೋಲಿಕೆಯುಳ್ಳವನಾದನು.



ಲ್ಪಟ್ಟು, ಮರಣದ ಪರ್ಯಂತರ, ಶಿಲುಬೆಯ ಮರಣದ ಪರ್ಯಂತರವೇ ವಿಧೇಯನಾಗಿ, ತನ್ನನ್ನು [1]ತಗ್ಗಿಸಿ
೯, ೧೦ ಕೊಂಡನು. ಆದದರಿಂದ ದೇವರು ಅವನನ್ನು ಮೇಲಕ್ಕೆ ಮೇಲಾಗಿ ಎತ್ತಿ, [2]ಯೇಸುವಿನ ಹೆಸ
ರಿನಲ್ಲಿ ಪರಲೋಕದಲ್ಲಿಯೂ ಭೂಮಿಯಲ್ಲಿಯೂ ಭೂಮಿಯ ಕೆಳಗೆಯೂ ಇರುವವರ ಮೊಣಕಾಲುಗಳೆ
೧೧ ಲ್ಲಾ ಬೊಗ್ಗಿ, ಯೇಸು ಕ್ರಿಸ್ತನು ಕರ್ತನೆಂದು, ಎಲ್ಲಾ ನಾಲಿಗೆಗಳು ತಂದೆಯಾದ ದೇವರ ಮಹಿಮೆಗಾಗಿ
ಅರಿಕೆ ಮಾಡುವ ಹಾಗೆ, ಎಲ್ಲಾ ಹೆಸರಿನ [3]ಮೇಲಿನ ಹೆಸರನ್ನು ಅವನಿಗೆ ದಯ ಮಾಡಿದನು.
೧೨ [4]ಆದ ಕಾರಣ, ನನ್ನ ಪ್ರಿಯರೇ, ಯಾವಾಗಲೂ ವಿಧೇಯರಾಗಿದ್ದ ಪ್ರಕಾರ, ನಾನು ಸಮೀಪದಲ್ಲಿದ್ದಾಗ
ಮಾಡಿದ ಹಾಗೆ ಮಾತ್ರವಲ್ಲ, ಬಹು ಹೆಚ್ಚಾಗಿ ಈಗ ನಾನು ದೂರದಲ್ಲಿರುವಾಗ, ಭಯದಿಂದಲೂ ನಡುಗಿ
೧೩ ನಿಂದಲೂ ನಿಮ್ಮ ರಕ್ಷಣೆಯನ್ನು ಉಂಟು ಮಾಡಿ ಕೊಳ್ಳಿರಿ. ಯಾಕಂದರೆ [5]ಇಚ್ಛೈಸುವದನ್ನೂ ಯತ್ನೈಸು
೧೪ ವದನ್ನೂ ತನ್ನ ಸುಯೋಚನೆಯ ಪ್ರಕಾರ ನಿಮ್ಮಲ್ಲಿ ಯತ್ನೈಸುವವನು ದೇವರೇ. ನಾನು ಸುಮ್ಮನೆ ಓಡ
ಲಿಲ್ಲ, ಸುಮ್ಮನೆ ಕಷ್ಟ ಪಡಲಿಲ್ಲವೆಂದು, ಕ್ರಿಸ್ತನ ದಿವಸದಲ್ಲಿ ಹೆಚ್ಚಳ ಪಡುವದಕ್ಕೆ ಜೀವದ ವಾಕ್ಯವನ್ನು ಹಿಡಿ
೧೫ ದು ಕೊಂಡು, ಲೋಕದ ಬೆಳಕುಗಳ ಹಾಗೆ [6]ಪ್ರಕಾಶಿಸುವ ನೀವು, ಡೊಂಕಾದ ಮೂರ್ಖ [7]ಸಂತತಿಯ
(ದ್ವಿತೀಯ ನ್ಯಾ. ೩೨. ೫.) ಮಧ್ಯದಲ್ಲಿ ನಿಷ್ಕಳಂಕರೂ ನಿರ್ದೋಷಿಗಳೂ ದೇವರ ನಿರ್ಮಲವಾದ ಮಕ್ಕ
೧೬ ಳೂ ಆಗುವ ಹಾಗೆ, ಗುಣುಗುಟ್ಟುಗಳೂ ತರ್ಕಗಳೂ ಇಲ್ಲದೆ, ಎಲ್ಲಾ ಮಾಡಿರಿ.
೧೭ ಇದಲ್ಲದೆ, ನಿಮ್ಮ ವಿಶ್ವಾಸದ ಬಲಿಯ ಮೇಲೆಯೂ ಸೇವೆಯ ಮೇಲೆಯೂ ನಾನು [8]ಹೊಯ್ಯಲ್ಪಟ್ಟರೂ,
೧೮ ಸಂತೋಷಿಸಿ, ನಿಮ್ಮೆಲ್ಲರ ಸಂಗಡ ಸಂತೋಷಿಸುವೆನು. ಅದಕ್ಕೋಸ್ಕರವೇ ನೀವು ಸಹ ಸಂತೋಷಿಸಿ, ನನ್ನ
ಸಂಗಡ ಸಂತೋಷಿಸಿರಿ.

1. ಮಹೋನ್ನತನಾದ ದೇವರು ಈ ಲೋಕದಲ್ಲಿ ಅವತರಿಸಿದ್ದು, ಶಿಲುಬೆಯ ಮೇಲೆ ಹೀನವಾದ ಮರಣ ಹೊಂದ ಸಮ್ಮತಿಸಿದ್ದೂ ಎಷ್ಟೋ ದೀನತ್ವವು. (ಗಲಾ. ೩. ೧೩, ೧೪. ಇಬ್ರೀ. ೧೨. ೨.) ಹೌದು, ಪಾತಾಳದ ಮಟ್ಟಿಗೂ ತನ್ನನ್ನು ತಗ್ಗಿಸಿ ಕೊಂಡನು.

2. ಯೇಸು ಎಂಬ ಶ್ರೇಷ್ಠ ನಾಮವನ್ನು ತ್ರೈಲೋಕವೂ ಕೊಂಡಾಡುವದು. ಪರಲೋಕದ ದೂತರೂ, ಭೂಲೋಕದ ಮನುಷ್ಯರೂ ಆತನ ಪ್ರೀತಿಯನ್ನು ಗ್ರಹಿಸಿ ಆತನ ಹೆಸರನ್ನು ಇಂಪಾಗಿ ಸ್ತುತಿಸುವರು. ನರಕದಲ್ಲಿರುವ ಪಿಶಾಚರೂ ದುಷ್ಟ ಮನುಷ್ಯರೂ ಆತನ ಶ್ರೇಷ್ಠ ನಾಮದ ಮುಂದೆ ಮನೋಸಂಕಟದಿಂದ ಎರಗುವರು. ನರಕಲೋಕವು ಸ್ವಂತ ಆಳಿಕೆಯಲ್ಲಿ ಇರಲಾರದು.

3. ಈ ಮೇಲಾದ ಹೆಸರು ಯೇಸು ಎಂಬುವದೇ. ಆತನ ದೀನತ್ವವನ್ನು ಪ್ರಕಟ ಮಾಡಿದ ಈ ಹೆಸರೇ ಆತನ ಘನವನ್ನೂ ಮಹಿಮೆಯನ್ನೂ ಪ್ರಕಟ ಮಾಡುವಂಥಾದ್ದಾಗಿರುವದು. ಯೆಹೋವ ಯೇಸು, ಕರ್ತನಾದ ರಕ್ಷಕನೆಂಬುವದು ಇಂಪಾದದ್ದೇ. ಆತನ ಹೆಸರನ್ನು ತಿಳಿದು ಅನುಭವಿಸಿದವರು ಮಹೋಲ್ಲಾಸದಿಂದ ಸ್ತುತಿಸುವರು.

4. ಜಗದ್ರಕ್ಷಕನಾದ ಯೇಸು ತನ್ನನ್ನು ಅಲ್ಲಗಳೆದು ಬರಿದು ಮಾಡಿ ಕೊಂಡು, ಭೂಲೋಕದಲ್ಲಿ ತನ್ನ ಪುಣ್ಯ ಕ್ರಿಯೆಯನ್ನು ಮುಗಿಸಿ, ಪರದಲ್ಲಿ ಮಹಿಮೆ ಹೊಂದಿದ ಪ್ರಕಾರ, ನೀವು ಸಹ ನಿಮ್ಮ ರಕ್ಷಣೆಯನ್ನು ಸಾಧಿಸಿ ಕೊಳ್ಳಿರಿ, ಅನ್ನುತ್ತಾನೆ.

5. ಮೇಲಿನ ವಚನದಲ್ಲಿ ಮನುಷ್ಯನ ಸ್ವಾಧೀನವೂ, ಈ ವಚನದಲ್ಲಿ ದೇವರ ಕ್ರಿಯೆಯೂ ತೋರುತ್ತದೆ. ಮನುಷ್ಯನು ಸ್ವಾಧೀನಚಿತ್ತವುಳ್ಳವನಾಗಿರುವದರಿಂದ ಅವನು ತನ್ನ ರಕ್ಷಣೆಯನ್ನು ಭಯದಿಂದಲೂ ನಡುಗಿನಿಂದಲೂ ಉಂಟು ಮಾಡಿ ಕೊಳ್ಳ ಬೇಕು. ಆದರೂ ಅವನು ಮುಗಿಸ ತಕ್ಕ ಅಪೇಕ್ಷೆಯೂ ಕ್ರಿಯೆಯೂ ದೇವರ ಕೃಪೆಯಿಂದಲೇ ಆಗ ಬೇಕು. ರಕ್ಷಣೆಯ ವಿಷಯವಾಗಿ ದೇವರು ಮಾಡ ತಕ್ಕ ಕಾರ್ಯವೂ, ಮನುಷ್ಯನು ಮಾಡ ತಕ್ಕ ಕಾರ್ಯವೂ ಈ ವಚನಗಳಲ್ಲಿ ದಿಟ್ಟವಾಗಿ ಹೇಳಿ ಇದೆ. ಎಲ್ಲಾ ದೇವರೇ ಮಾಡಲಿ ಎಂದು ನಾವು ಸುಮ್ಮನಿರ ಬಾರದು.

6. ಜೀವದ ವಾಕ್ಯವಾದ ಸುವಾರ್ತೆಯ ಬೆಳಕನ್ನು ಕೈಯಲ್ಲಿ ಹಿಡಿದಿರುವವರು ಕಿರಣಗಳ ಹಾಗೆ ಪ್ರಕಾಶಿಸುವರು. ಅವರು ಅಂಧಕಾರದಲ್ಲಿ ನಡಿಯರು. ಅಂಧಕಾರದ ಕ್ರಿಯೆಗಳನ್ನು ಮಾಡಲಾರರು.

7. ಪಾಪದಿಂದ ಕೆಟ್ಟು ಹೋದ ಲೋಕವು ಡೊಂಕೂ ಮೂರ್ಖವೂ ಉಳ್ಳದ್ದಾಗಿದೆ. (ದ್ವಿತೀಯ ನ್ಯಾ. ೩೨. ೫.) ಆದದರಿಂದ ಅದರಲ್ಲಿ ಸಂಚರಿಸುವ ದೇವಭಕ್ತರು ಹೊರಗೆ ನಿರಪರಾಧಿಗಳಾಗಿಯೂ, ಒಳಗೆ ನಿಷ್ಕಳಂಕರಾಗಿಯೂ ಇದ್ದು, ನೆಟ್ಟಗಾದ ಪರಿಶುದ್ಧರಾಗಿ ತೋರಿದರೆ, ಪ್ರಪಂಚದ ಮನುಷ್ಯರಿಗೆ ಒಳ್ಳೇ ಮಾದ್ರಿಯಾಗಿರುವರು. ಭಕ್ತರಲ್ಲಿ ಗುಣುಗುಟ್ಟುಗಳೂ ತರ್ಕಗಳೂ ಇದ್ದರೆ, ಅವರ ನಡತೆ ನಿಷ್ಪ್ರಯೋಜನವಾಗಿರುವದು.

8. ಇದು ಪಾನದರ್ಪಣೆಯ ಹಾಗೆ ಹೊಯ್ಯಲ್ಪಡುವದನ್ನು ಕುರಿತದ್ದು. (ಹೊರ. ೨೯. ೪೦, ೪೧. ೨ ತಿಮೊ. ೪. ೬.) ಫಿಲಿಪ್ಪಿ ಸಭೆಯವರ ವಿಶ್ವಾಸವು ಬಲಿಯ ಹಾಗೆಯೂ, ರಕ್ತಸಾಕ್ಷಿಯಾಗಿ ಸಾಯುವ ಪೌಲನ ರಕ್ತವು ಅದರ ಮೇಲೆ ಹೊಯ್ಯಲ್ಪಡುವ ಪಾನದರ್ಪಣೆಯ ಹಾಗೆಯೂ ಉಪಮಾನವಾಗಿ ಹೇಳಿ ಇದೆ. (ರೋಮಾ. ೧೫. ೧೫, ೧೬.) ಈ ಪಾನದರ್ಪಣೆ ಅರ್ಪಿಸುವದರಿಂದ ಪೌಲನಿಗುಂಟಾಗುವ ಸಂತೋಷವು ಫಿಲಿಪ್ಪಿಯರಿಗೂ ಉಂಟಾಗುವದೆಂದು ಸೂಚಿಸಿ ಇದೆ. (೧೮. ವ.)

೧೩ ಯೇಸುವಿನಿಂದ ಹಿಡಿಯಲ್ಪಟ್ಟೆನೋ, ಅದನ್ನು ಹಿಡಿದು ಕೊಳ್ಳ ಬೇಕೆಂದು [1]ಹಿಂದಟ್ಟುತ್ತೇನೆ. ಸಹೋದರರೇ,
ನಾನು ಹಿಡಿದವನೆಂದು ನನ್ನನ್ನು ನೆನಸಿ ಕೊಳ್ಳುವದಿಲ್ಲ. ಒಂದೇ ಮಾತ್ರ—ಹಿಂದಿನವುಗಳನ್ನು ಮರೆತು,
೧೪ ಮುಂದಿನವುಗಳಿಗೆ ಅಂದಿ ಕೊಳ್ಳ ಬೇಕೆಂದು, ಕ್ರಿಸ್ತ ಯೇಸುವಿನಲ್ಲಿ ದೇವರಿಂದಾದ [2]ಮೇಗಳ ಕರೆಯುವಿಕೆ
ಯ ಬಹುಮಾನವನ್ನು ಗುರಿ ಇಟ್ಟು, ಹಿಂದಟ್ಟುತ್ತೇನೆ.

೧೫ ಹಾಗಾದರೆ, ಸಂಪೂರ್ಣರಾದವರಷ್ಟು [3]ಈ ಮನಸ್ಸಾಗಿರುವ. ಮತ್ತು ಯಾವದರಲ್ಲಿಯೂ ಬೇರೆ ಮನ
೧೬ ಸ್ಸಾಗಿದ್ದರೆ, ಅದನ್ನು ಸಹ ದೇವರು ನಿಮಗೆ ತಿಳಿಸುವನು. ಆದರೆ ನಾವು ಶೇರಿ ಕೊಂಡಿರುವ ಅದೇ ಪ್ರಮಾ
ಣದಿಂದ ನಡಕೊಂಡು, ಒಂದೇ ಮನಸ್ಸಾಗಿರುವ.

೧೭ ಸಹೋದರರೇ, ನನ್ನನ್ನು ಕೂಡ ಅನುಸರಿಸುವವರಾಗಿ, ನಾವು ನಿಮಗೆ ಮಾದರಿಯಾಗಿರುವ ಪ್ರಕಾರ
೧೮ ನಡೆದು ಕೊಳ್ಳುವವರನ್ನು ಗುರುತಿಡಿರಿ. ಯಾಕಂದರೆ ಅನೇಕರು ನಡೆದು ಕೊಳ್ಳುತ್ತಾರೆ—ಅವರನ್ನು ಕು
ರಿತು ಕ್ರಿಸ್ತನ ಶಿಲುಬೆಯ ಶತ್ರುಗಳಾಗಿದ್ದಾರೆಂದು, [4]ಅನೇಕ ಸಾರಿ ನಿಮಗೆ ಹೇಳಿದೆನು; ಮತ್ತು ಈಗ ಅಳು
೧೯ ತ್ತಾ ಹೇಳುತ್ತೇನೆ. ಅವರ ಅಂತ್ಯವು ನಾಶನವೇ; ಅವರ ದೇವರು ಹೊಟ್ಟೆಯೇ; ಅವರ ಮಹಿಮೆಯು
೨೦ ಅವರ ನಾಚಿಕೆಯಲ್ಲಿಯೇ; ಅವರು [5]ಭೂಲೋಕದವುಗಳ ಮೇಲೆ ಮನಸ್ಸಿಡುತ್ತಾರೆ. ಹ್ಯಾಗಂದರೆ, ನಮ್ಮ
[6]ಪಟ್ಣವಾಸವು ಪರಲೋಕದಲ್ಲಿ ಉಂಟು; ಅಲ್ಲಿಂದಲೇ ಕರ್ತನಾದ ಯೇಸು ಕ್ರಿಸ್ತನೆಂಬ ರಕ್ಷಕನು ಬರುವದನ್ನು
೨೧ ಎದುರು ನೋಡುತ್ತೇವೆ. ಅವನು ತನಗೆ ಎಲ್ಲವನ್ನು ಅಧೀನ ಮಾಡ ಬಹುದಾದ ಯತ್ನದ ಪ್ರಕಾರ, ನಮ್ಮ
ನೀಚತನದ ಶರೀರವನ್ನು ತನ್ನ ಮಹಿಮೆಯ ಶರೀರಕ್ಕೆ ಸಾರೂಪ್ಯವಾಗುವ ಹಾಗೆ, [7]ಮಾರ್ಪಡಿಸುವನು.

4. ಆದದರಿಂದ, ಪ್ರಿಯರೂ ಇಷ್ಟರೂ ಆದ ನನ್ನ ಸಹೋದರರೇ, ನನ್ನ ಸಂತೋಷವೂ ಕಿರೀಟವೂ ಆಗಿರುವ
ವರೇ, [8]ಹೀಗೆ ಕರ್ತನಲ್ಲಿ ನೆಲೆಯಾಗಿರ್ರಿ, ಪ್ರಿಯರೇ.

---

ಕರ್ತನು ಅವನನ್ನು ಯಾವದಕ್ಕಾಗಿ ಹಿಡಿದನೋ, ರಕ್ಷಣೆ ಎಂಬ ಆ ಮೇಲಾದ ಅರ್ಥವನ್ನು ಹಿಡಿಯುವ ಹಾಗೆ ಪ್ರಯಾಸ ಪಟ್ಟನು.

1. ಹಿಂದಟ್ಟುತ್ತೇನೆ ಎಂಬುವದು ೧೪ನೇ ವಚನದಲ್ಲಿರುವ ಪ್ರಕಾರ, ಗುರಿಯನ್ನು ನೋಡಿ ಕೊಂಡು ಹಿಂದಟ್ಟುತ್ತೇನೆಂಬುವದೇ.

2. ಇದು ದೇವರ ಕರಿಯುವಿಕೆ ಎಂಬ ಅರ್ಥವು. (ಇಬ್ರಿ. ೩. ೧.) ಓಟರಂಗದಲ್ಲಿ ಓಡುವವನು ಹಿಂದಿನವುಗಳನ್ನು ಯೋಚಿಸದೆ, ತನ್ನ ಮುಂದೆ ಇಟ್ಟಿರುವ ಗುರಿಯನ್ನು ನೋಡಿ ವೇಗವಾಗಿ ಓಡುವ ಪ್ರಕಾರ, ಪೌಲನು ಪರಮ ಕರಿಯುವಿಕೆಯಾದ ನಿತ್ಯ ಮನೆಯನ್ನು ಗುರಿ ಇಟ್ಟು ಆಶೆಯಿಂದ ಓಡಿದನು.

3. ತಿಳುವಿಕೆಯಲ್ಲಿಯೂ ಅನುಭವದಲ್ಲಿಯೂ ಸಂಪೂರ್ಣರಾದವರು (೧ ಕೊರಿ. ೨. ೬.) ಈ ವಿಷಯವಾಗಿ ಪೌಲನು ಹೇಳಿದ ಅಭಿಪ್ರಾಯವನ್ನು ಸರಿ ಎಂದು ಒಪ್ಪಿ ಕೊಂಡು, ತಮ್ಮನ್ನು ಅಲ್ಲಗಳೆದು ನಡಿಯುವರು. (೭. ವ.) ಈ ಅಭಿಪ್ರಾಯವನ್ನು ಒಪ್ಪಿ ಕೊಳ್ಳದವರು ತಾವು ತಿಳುಕೊಂಡ ಸತ್ಯದ ಪ್ರಕಾರ ನಡಿಯುವರಾದರೆ, ದೇವರ ಕೃಪೆಯಿಂದ ಕಡೆಯಲ್ಲಿ ಅದನ್ನು ಒಪ್ಪಿಕೊಳ್ಳುವರು. (೧೫, ೧೬. ವ.)

4. ಅವನು ಫಿಲಿಪ್ಪಿಯಲ್ಲಿದ್ದಾಗ ಮುಖಾಮುಖವಾಗಿಯೂ, ಬೇರೆ ಕಾಲಗಳಲ್ಲಿ ಕ್ರೈಸ್ತಸಹೋದರರ ಮೂಲಕವಾಗಿಯೂ, ಶಿಲುಬೆಯ ಶತ್ರುಗಳಾದ ದ್ಯೆವದ್ರೋಹಿಗಳನ್ನು ಕುರಿತು ಅನೇಕ ಸಾರಿ ಹೇಳಿ ಇದ್ದನು. ಈಗ ಕಣ್ಣೀರಿನಿಂದ ಹೇಳುತ್ತಾನೆ. ಅವನು ತನ್ನ ಬಂಧಗಳನ್ನು ಕುರಿತು ದುಃಖ ಪಡದೆ, ಶಿಲುಬೆಯ ಶತ್ರುಗಳನ್ನು ಕುರಿತು ದುಃಖ ಪಡುತ್ತಾನೆ.

5. ಹೊಟ್ಟೆಯೇ ಅವರ ದೇವರಾಗಿಯೂ ನಾಚಿಕೆಯಾದವುಗಳೇ ಅವರ ಮಹಿಮೆಯಾಗಿಯೂ, ಭೂಲೋಕದವುಗಳ ಮೇಲೆ ಆಶೆಯುಳ್ಳವರಾಗಿಯೂ ಇದ್ದದರಿಂದ, (ರೋಮಾ. ೮. ೫.) ಅವರ ಅಂತ್ಯವು ನಾಶನವೇ ಆಗಿರುವದು. ಇಂಥವರಿಗಾಗಿ ಅಳ ತಕ್ಕದ್ದೇ.

6. ಅವರ ಪಟ್ಣವಾಸವು ಭೂಮಿಯಾದರೆ, ನಮ್ಮ ಪಟ್ಣವಾಸವು ಪರಲೋಕವೇ. ಭೂಲೋಕವು ನಾವು ಪರವಾಸಿಗಳಾಗಿ ತಂಗುವ ಸ್ಥಳವಾಗಿಯೂ, ಪರಲೋಕವು ನಮಗೆ ಸ್ಥಿರವಾದ ನಿವಾಸವಾಗಿಯೂ ಇರುತ್ತದೆ. ನಮ್ಮ ನಡತೆಯು ಅದಕ್ಕೆ ತಕ್ಕದ್ದಾಗಿರ ಬೇಕು. ಯಾವಾಗಲೂ ರಕ್ಷಕನ ಬರುವಿಕೆಯನ್ನು ಎದುರು ನೋಡುವವರಾಗಿ ನಡಿಯ ಬೇಕು.

7. ಮಣ್ಣಿನಿಂದ ರೂಪಿಸಲ್ಪಟ್ಟು ಮಣ್ಣಾಗಿ ಹೋಗುವ ಈ ಶರೀರವು ನೀಚವಾದದ್ದಾದರೂ, ಕ್ರಿಸ್ತನ ಮಹಿಮೆಯ ಶರೀರದಂತೆ ಇದು ಮಹಿಮೆ ಹೊಂದುವದು. (೧ ಕೊರಿ. ೧೫. ೪೨–೪೯.) ಏನೂ ಇಲ್ಲದಿರುವಾಗ ಸಮಸ್ತವನ್ನು ಸೃಷ್ಟಿಸಿದ ಸರ್ವಶಕ್ತನಾದ ದೇವರು ಮಣ್ಣಿಗೆ ಮಣ್ಣಾಗುವ ಈ ನೀಚ ಶರೀರವನ್ನು ತನ್ನ ಮಹಿಮೆಯುಳ್ಳ ಶರೀರಕ್ಕೆ ಸಮಾನವಾಗಿ ಮಾರ್ಪಡಿಸಿ ಪರಮ ರಾಜ್ಯಕ್ಕೆ ಶೇರಿಸಿ ಕೊಳ್ಳುವನು.

8. ಭಕ್ತರೆಲ್ಲರು ತನ್ನ ಹಾಗೆ ನಡೆದು ಪರಮ ರಾಜ್ಯದ ಸುಖಸಂಪತ್ತನ್ನು ಹುಡುಕುವವರಾಗಿ ಇರ ಬೇಕೆಂದು ಪೌಲನು ಅತಿ ಪ್ರೀತಿಯಿಂದ ಅವರಿಗೆ ಬುದ್ಧಿ ಹೇಳುತ್ತಾನೆ. (೩. ೧೭, ೧೮. ಯೋಹಾ. ೧೫. ೪.)



೨ ಕರ್ತನಲ್ಲಿ ಅದೇ ಮನಸ್ಸಾಗಿರ ಬೇಕೆಂದು, [1]ಯುವೋದ್ಯಳನ್ನು ಬೇಡಿ ಕೊಳ್ಳುತ್ತೇನೆ, ಸುಂತುಕೆಯನ್ನು
೩ ಬೇಡಿ ಕೊಳ್ಳುತ್ತೇನೆ. ಮತ್ತು, ನಿಜ ಜತೆಗಾರನೇ, [2]ಅವರಿಗೆ ಸಹಾಯ ಮಾಡು, ಎಂದು ನಿನ್ನನ್ನು ಕೇಳಿ
ಕೊಳ್ಳುತ್ತೇನೆ. ಅವರು [3]ಕ್ಲೆಮೆಂತನ ಸಂಗಡಲೂ, ಮಿಕ್ಕಾದ ನನ್ನ ಜತೆಕೆಲಸದವರ ಸಂಗಡಲೂ ಸುವಾ
ರ್ತೆಯಲ್ಲಿ ನನ್ನ ಕೂಡ ಕಷ್ಟ ಪಟ್ಟರು; ಅವರ ಹೆಸರುಗಳು ಜೀವದ ಪುಸ್ತಕದಲ್ಲಿ ಅವೆ.
೪ ಕರ್ತನಲ್ಲಿ ಯಾವಾಗಲೂ [4]ಸಂತೋಷಿಸಿರಿ; ಸಂತೋಷಿಸಿರಿ, ಎಂದು ತಿರಿಗಿ ಹೇಳುತ್ತೇನೆ.
೫ ನಿಮ್ಮ [5]ಸಾತ್ವಿಕತ್ವವು ಎಲ್ಲಾ ಮನುಷ್ಯರಿಗೆ ತಿಳಿಯಲ್ಪಡಲಿ; ಕರ್ತನು [6]ಸಮೀಪವಾಗಿದ್ದಾನೆ.
೬ ಯಾವದಕ್ಕೂ ಚಿಂತೆ ಪಡ ಬೇಡಿರಿ; ಆದರೆ ಎಲ್ಲಾದರಲ್ಲಿ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ
೭ ನಿಮ್ಮ ಬಿನ್ನಹಗಳು [7]ಸ್ತೋತ್ರದ ಸಂಗಡ ದೇವರಿಗೆ ಅರಿಕೆಯಾಗಲಿ; ಆಗ ಎಲ್ಲಾ ಬುದ್ಧಿಯನ್ನು ಮೀರುವ
ದೇವರ ಸಮಾಧಾನವು ನಿಮ್ಮ ಹೃದಯಗಳನ್ನೂ [8]ಮನಸ್ಸುಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಪಾಡುವದು.
೮ ಕಡೆಯಲ್ಲಿ, ಸಹೋದರರೇ, ಸತ್ಯವಾದವುಗಳು ಯಾವವೋ, [9]ಘನವಾದವುಗಳು ಯಾವವೋ, ನ್ಯಾಯ
ವಾದವುಗಳು ಯಾವವೋ, ಪವಿತ್ರವಾದವುಗಳು ಯಾವವೋ, ಪ್ರಿಯಕರವಾದವುಗಳು ಯಾವವೋ, ಸು
ಕೀರ್ತಿಯಾದವುಗಳು ಯಾವವೋ, ಯಾವ [10]ಸದ್ಗುಣವಿದ್ದರೆ, ಯಾವ ಸ್ತೋತ್ರವಿದ್ದರೆ, ಅವುಗಳನ್ನೇ ಆಲೋ
೯ ಚಿಸಿರಿ. ನೀವು ಕಲಿತು, ಗ್ರಹಿಸಿ, ಕೇಳಿ, ನನ್ನಲ್ಲಿ ನೋಡಿದವುಗಳು ಯಾವವೋ, ಅವುಗಳನ್ನೇ ಮಾಡಿರಿ;
ಆಗ ಸಮಾಧಾನದ ದೇವರು ನಿಮ್ಮ ಸಂಗಡ ಇರುವನು.

---

1. ಆದಿ ಸಭೆಯಲ್ಲಿ ಅನೇಕ ಭಕ್ತಿಯುಳ್ಳ ಸ್ತ್ರೀಯರು ಕರ್ತನಿಗೆ ಸೇವೆ ಮಾಡಿದರು. (ಅಪೊ. ಕ್ರಿ. ೧೮. ೨೬. ರೋಮಾ. ೧೬. ೧–೫.) ಹಾಗೆಯೇ ಯುವೋದ್ಯಳೂ ಸುಂತುಕೆಯೂ ಪೌಲನಿಗೆ ಸಹಾಯವಾಗಿ ಫಿಲಿಪ್ಪಿಯ ಸಭೆಯಲ್ಲಿ ದಿವ್ಯ ಸೇವೆ ಮಾಡಿದರೆಂದು ತೋರುತ್ತದೆ. ಇವರು ಒಂದು ವೇಳೆ ಸಹಾಯಕರೆಂಬ ಉದ್ಯೋಗ ಮಾಡಿದವರಾಗಿರ ಬಹುದು. ಯಾವ ಕಾರಣದಿಂದಲೋ ಇವರಿಬ್ಬರಲ್ಲಿ ಮನಸ್ತಾಪವು ಸಂಭವಿಸಿತು. ಅವರು ಮನಸ್ತಾಪವನ್ನು ಬಿಟ್ಟು ಏಕ ಮನಸ್ಸುಳ್ಳವರಾಗಿ ನಡಿಯ ಬೇಕೆಂದು ಪೌಲನು ಪ್ರೀತಿಯಿಂದ ಅವರಿಗೆ ಬುದ್ಧಿ ಹೇಳುತ್ತಾನೆ.

2. ಯುವೋದ್ಯಳೂ ಸುಂತುಕೆಯೂ ತಮ್ಮ ಮನಸ್ತಾಪವನ್ನು ಬಿಟ್ಟು ಏಕ ಮನಸ್ಸುಳ್ಳವರಾಗುವ ಹಾಗೆ ಸಹಾಯ ಮಾಡ ಬೇಕೆಂದು ಒಬ್ಬ ಉತ್ತಮ ಜತೆಗಾರನನ್ನು ಕೇಳಿ ಕೊಳ್ಳುತ್ತಾನೆ. ಈ ಜತೆಗಾರನ್ಯಾರೋ ತಿಳಿಯದು. ಅವರಲ್ಲಿದ್ದ ಅಧ್ಯಕ್ಷರೊಳಗೊಬ್ಬನಾಗಿರ ಬಹುದು. (೧. ೧.)

3. ಕ್ಲೆಮೆಂತನ ಹೆಸರೂ ಪೌಲನ ಸಂಗಡ ಸೇವೆ ಮಾಡಿದ ಪುರುಷರೂ ಸ್ತ್ರೀಯರೂ ಆದ ಅನೇಕ ಭಕ್ತರ ಹೆಸರುಗಳೂ ಜೀವದ ಪುಸ್ತಕದಲ್ಲಿ ಉಂಟು. ಇಂಥವರು ಕಡೆಯಲ್ಲಿ ಜೀವದ ಕಿರೀಟ ಹೊಂದುವರು.

4. ಸುಖದಲ್ಲಿಯೂ ದುಃಖದಲ್ಲಿಯೂ, ಹೆಚ್ಚಿಗೆಯಲ್ಲಿಯೂ ಕೊರತೆಯಲ್ಲಿಯೂ, ಕರ್ತನಲ್ಲಿ ಸಂತೋಷ ಪಡುವದು ಕ್ರೈಸ್ತರ ಭಾಗ್ಯವಾಗಿದೆ. (೩. ೧.)

5. ಸಾತ್ವಿಕತ್ವವು ಎಂಬುವದು ಅನ್ಯರ ಕಾರ್ಯಗಳನ್ನು ಯೋಚಿಸಿ ಅವರನ್ನು ದಯವಾಗಿ ನಡಿಸುವ ಸುಗುಣವೇ. (೨ ಕೊರಿ. ೧೦. ೧.)

6. ಇದು ಯೆರೂಸಲೇಮಿನ ನಾಶನವು ಸಮೀಪವಾಗಿರುವದನ್ನು ಕುರಿತದ್ದಾಗಿರುವದು. ಕರ್ತನು ಅದರ ಪಾಪಕ್ಕಾಗಿ ಮುಯ್ಯಿ ಕೊಡ ಸಿದ್ಧವಾಗಿದ್ದನು. (ಮತ್ತಾ. ೨೪. ೧. ವಚನದ ವ್ಯಾಖ್ಯಾನ ನೋಡ ಬೇಕು.) ಅದನ್ನು ನೆನಸಿ ಬೇರೊಬ್ಬರನ್ನು ದಯವಾಗಿ ನಡಿಸಲೂ, ಲೌಕಿಕ ಕಾರ್ಯಗಳಲ್ಲಿ ಮಿತಿ ಮೀರಿ ಚಿಂತೆ ಪಡದೆ ಇರಲೂ ಬೇಕು. (೬. ವ.) ಆತನ ಪ್ರಸನ್ನತೆಯನ್ನು ಎದುರು ನೋಡುವವರಾಗಿ ಸಂತೋಷ, ಶಾಂತಿ, ನಂಬಿಕೆಗಳಿಂದ ನಡಿಯ ಬೇಕು.

7. ಹೊಂದಿದ ಮೇಲುಗಳಿಗಾಗಿ ದೇವರಿಗೆ ಸಲ್ಲಿಸ ತಕ್ಕ ಸ್ತೋತ್ರದ ಸಂಗಡ ಕೂಡಿ ಇರದ ಪ್ರಾರ್ಥನೆಯು ಸರಿಯಾದ ಪ್ರಾರ್ಥನೆ ಅಲ್ಲ.

8. ಯಾವದನ್ನೂ ಕುರಿತು ಚಿಂತೆ ಪಡದೆ, ಸಮಸ್ತವನ್ನೂ ಪ್ರಾರ್ಥನೆಯ ಮೂಲಕವಾಗಿ ದೇವರಿಗೆ ಒಪ್ಪಿಸುವವರಿಗೆ ಪೂರ್ಣ ಸಮಾಧಾನ ಉಂಟಾಗುವದು. ಈ ಸಮಾಧಾನವು ಹೃದಯವೆಂಬ ಒಳಕೋಟೆಯನ್ನೂ, ಚಿಂತೆಗಳೆಂಬ ಹೊರಗಿನ ಅಲಂಗವನ್ನೂ ಕಾಯುವದು. ಕ್ರಿಸ್ತನಿಂದ ಬರುವ ಈ ಸಮಾಧಾನವು ಎಲ್ಲಾ ಬುದ್ಧಿಯನ್ನು ಮೀರುವ ದೇವರ ಸಮಾಧಾನವೇ.

9. ಮೇಲೆ ಹೇಳಲ್ಪಟ್ಟ ಸಮಾಧಾನ ಹೊಂದಿದ ಮನಸ್ಸುಳ್ಳವರು ಈ ವಚನಗಳಲ್ಲಿ ಹೇಳಿರುವ ಸದ್ಗುಣಗಳಲ್ಲಿಯೂ ಸುವಾರ್ತೆಯ ಸತ್ಯಗಳಲ್ಲಿಯೂ ನಡಿಯುವರು. ಅವರು ಮನುಷ್ಯರ ಮುಂದೆಯೂ ದೇವರ ಮುಂದೆಯೂ ಯಥಾರ್ಥವಂತರಾಗಿಯೂ ಕ್ರಮಸ್ಥರಾಗಿಯೂ ತೋರುವರು. ಕ್ರಮಸ್ಥರೆಂಬುವದಕ್ಕೆ ಘನವಾದ ಗುಣವುಳ್ಳವರೆಂದು ಹೇಳ ಬಹುದು.

10. ನೀತಿ ಅಂದರೆ ಯಥಾರ್ಥತ್ವ, ಪವಿತ್ರವಂದರೆ ತ್ರಿಕರಣ ಶುದ್ಧಿ, ಪ್ರಿಯಕರವಾದವುಗಳಂದರೆ ಪ್ರೀತಿಯನ್ನು ಹುಟ್ಟಿಸುವಂಥವುಗಳು. ಇವೆಲ್ಲಾ ಸದ್ಗುಣಗಳಾಗಿಯೂ ಸುಕರ್ಮಗಳಾಗಿಯೂ ಇರುತ್ತವೆ. ಇಂಥಾ ಗುಣವೂ ನಡತೆಯೂ ಉಳ್ಳವರಿಗೆ ದೇವರಿಂದಲೂ ಮನುಷ್ಯರಿಂದಲೂ ಹೊಗಳಿಕೆ ಬರುವದು. ಇಂಥವರ ಸಂಗಡ ಸಮಾಧಾನದ ದೇವರು ಇರುವನು.

### ಕೃತಜ್ಞತೆಯೂ ವಂದನೆಯೂ ಉಳ್ಳಂಥ ಅಂತ್ಯೋಕ್ತಿಯು.

೧೦ ಆದರೆ, ಈಗಲಾದರೂ [1]ನನ್ನ ವಿಷಯವಾದ ನಿಮ್ಮ ಚಿಂತೆಯು ತಿರಿಗಿ [2]ಚಿಗುರಿತೆಂದು ಕರ್ತನಲ್ಲಿ ಮಹಾ
೧೧ ಸಂತೋಷ ಪಟ್ಟೆನು. ಈ ಚಿಂತೆಯಲ್ಲಿ ಇದ್ದಿರಿ; ಆದರೆ ಸಮಯವಾಗಲಿಲ್ಲ. ಕೊರತೆಯಿಂದ ನಾನು ಹೇಳಿದ
೧೨ ಹಾಗಲ್ಲ; ಯಾಕಂದರೆ ಇದ್ದ ಸ್ಥಿತಿಯಲ್ಲಿ [3]ತೃಪ್ತನಾಗಿರ ನಾನು ಕಲಿತಿದ್ದೇನೆ; ದೀನನಾಗಿರ ಬಲ್ಲೆನು; ಹೆಚ್ಚ
ಲೂ ಬಲ್ಲೆನು; ಎಲ್ಲೆಲ್ಲಿಯೂ, ಎಲ್ಲವುಗಳಲ್ಲಿಯೂ ತೃಪ್ತಿ ಹೊಂದಲೂ, ಹಸಿವೆ ಪಡಲೂ, ಹೆಚ್ಚಲೂ, ಕೊ
೧೩ ರತೆ ಪಡಲೂ, ಪೂರ ಶಿಕ್ಷಿತನಾಗಿದ್ದೇನೆ; [4]ನನ್ನನ್ನು ಬಲ ಪಡಿಸುವ ಕ್ರಿಸ್ತನಿಂದ ಎಲ್ಲಕ್ಕೆ ಶಕ್ತನಾಗಿದ್ದೇನೆ.
೧೪ ಆದಾಗ್ಯೂ ಉಪದ್ರದಲ್ಲಿ ನನಗೆ [5]ಸಹಾಯ ಕೊಟ್ಟು, ಚನ್ನಾಗಿ ಮಾಡಿದಿರಿ.

೧೫ ಇದಲ್ಲದೆ, ಫಿಲಿಪ್ಪಿಯರೇ, ಸುವಾರ್ತೆಯ [6]ಆರಂಭದಲ್ಲಿ ನಾನು ಮಕೆದೋನ್ಯದಿಂದ ಹೊರಟಾಗ, ನೀವೇ
ಹೊರ್ತು, ಬೇರೆ ಯಾವ ಸಭೆಯಾದರೂ ನನಗೆ [7]ಕೊಳ್ಳ ಕೊಡೋಣಗಳ ವಿಷಯ ಸಹಾಯ ಮಾಡಲಿಲ್ಲ
೧೬ ವೆಂದು, ನೀವೇ ಬಲ್ಲಿರಿ. ಏನಂದರೆ ಥೆಸ್ಸಲೊನೀಕದಲ್ಲಿಯೂ ಒಂದೆರಡು ಸಾರಿ ನನ್ನ ಅವಸರಕ್ಕೆ ಕಳುಹಿಸಿದಿರಿ.
೧೭ ನಾನು ದಾನವನ್ನು ಹುಡುಕಿದ ಹಾಗಲ್ಲ, ಆದರೆ ನಿಮ್ಮ ಲೆಖ್ಖಕ್ಕೆ ಹೆಚ್ಚುವ ಫಲವನ್ನು ಹುಡುಕುತ್ತೇನೆ.
೧೮ ಆದರೆ ಸುವಾಸನೆಯ ಪರಿಮಳವೂ, [8]ದೇವರನ್ನು ಮೆಚ್ಚಿಸುವ ಸಮರ್ಪಕವಾದ ಬಲಿಯೂ ಆಗಿರುವ ನಿಮ್ಮ
೧೯ ವುಗಳನ್ನು ಎಪಫ್ರೊದೀತನಿಂದ ತೆಗೆದು ಕೊಂಡು, ಎಲ್ಲಾ ಹೊಂದಿದ್ದೇನೆ, ಹೆಚ್ಚಿದ್ದೇನೆ, ತುಂಬಿದ್ದೇನೆ. ಆದರೆ
ನನ್ನ ದೇವರು, ಕ್ರಿಸ್ತ ಯೇಸುವಿನಿಂದ ತನ್ನ ಮಹಿಮೆಯ ಐಶ್ವರ್ಯದ ಪ್ರಕಾರ, ನಿಮ್ಮ [9]ಅವಸರವನ್ನೆಲ್ಲಾ
ಪೂರೈಸುವನು.

೨೦ ಇದಲ್ಲದೆ ನಮ್ಮ ತಂದೆಯಾದ ದೇವರಿಗೆ ಎಂದೆಂದಿಗೂ ಮಹಿಮೆ ಆಗಲಿ. ಆಮೆನ್.

---

1. ಫಿಲಿಪ್ಪಿ ಸಭೆಯವರು ತಿರಿಗಿ ತನ್ನನ್ನು ಜ್ಞಾಪಕ ಮಾಡಿಕೊಂಡು ಕಳುಹಿಸಿದ ಉಪಕಾರವು ದೇವರಿಗೆ ಕಾಣಿಕೆಯಾಯಿತೆಂದು ಪೌಲನು ಕೃತಜ್ಞತೆಯಿಂದ ಅರಿಕೆ ಮಾಡಿ, ಅವರಿಗೆ ಉಪಚಾರದ ಮಾತುಗಳನ್ನು ಹೇಳಿ, (೧೦—೨೦. ವ.) ವಂದನೆಯಿಂದಲೂ ಆಶೀರ್ವಾದದಿಂದಲೂ ಪತ್ರಿಕೆಯನ್ನು ಮುಗಿಸುತ್ತಾನೆ. (೨೧—೨೩. ವ.)

2. ಎಲೆಯುದುರಿದ ಮರವು ತಿರಿಗಿ ಚಿಗುರುವ ಪ್ರಕಾರ, ಫಿಲಿಪ್ಪಿ ಸಭೆಯವರು ಪೌಲನಿಗೆ ಸಹಾಯ ಮಾಡ ಬೇಕೆಂದಿದ್ದ ಮನಸ್ಸು ತಿರಿಗಿ ಚಿಗುರಿದ್ದರಿಂದ, ಅವನ ಮೇಲಿದ್ದ ತಮ್ಮ ವಾಂಛೆಯನ್ನು ತೋರಿಸ ಪ್ರಯತ್ನ ಮಾಡಿದರು. (೧೪, ೧೫. ವ.) ಪೌಲನು ಬಂಧಿಸಲ್ಪಟ್ಟ ಶೆರೆಯವನಾಗಿದ್ದದರಿಂದಲೂ, ಮುಂಚಿನಂತೆ ಕೈಕೆಲಸದಿಂದ ಸಂಪಾದಿಸ ಹೇತುವೆ ಇಲ್ಲದೆ ಇದ್ದದರಿಂದಲೂ ಫಿಲಿಪ್ಪಿ ಸಭೆಯವರು ಕಳುಹಿಸಿದ ದ್ರವ್ಯಸಹಾಯವು ಅವನಿಗೆ ಕಾಲಕ್ಕೆ ತಕ್ಕ ದೊಡ್ಡ ಸಹಾಯವಾಗಿತ್ತು.

3. ಇದ್ದ ಸ್ಥಿತಿಯಲ್ಲಿ ತೃಪ್ತರಾಗಿರುವದು ಕಷ್ಟವಾದ ಪಾಠವಾಗಿದೆ. ಲೌಕಿಕ ಮನಸ್ಸುಳ್ಳವರಲ್ಲಿ ಅದು ಆಗಲಾರದು. ಆದರೆ ಕ್ರಿಸ್ತನಲ್ಲಿ ಕಲಿತವರೇ ಹೊರ್ತು, ಬೇರೊಬ್ಬರು ಅದನ್ನು ಸರಿಯಾಗಿ ಕಲಿಯಲಾರರು.

4. ಕ್ರಿಸ್ತ ಯೇಸುವಿನಲ್ಲಿಯೇ ಸಮಸ್ತ ಬಲವೂ ಉಂಟು. (೧ತಿಮೊ. ೧. ೧೨.) ಆತನ ಸಹಾಯವಿಲ್ಲದೆ ನಾವು ಏನೂ ಮಾಡಲಾರೆವು. (ಯೋಹಾ. ೧೫. ೧—೮.)

5. ಫಿಲಿಪ್ಪಿಯರು, ಕೂಡ ಚಿಂತಿಸುವದರಿಂದಲೂ, ದ್ರವ್ಯ ಸಹಾಯದಿಂದಲೂ ಪೌಲನ ಸಂಗಡ ಏಕ ಮನಸ್ಸುಳ್ಳವರಾಗಿದ್ದರು.

6. ಪೌಲನು ಅವರಿಗೆ ಸುವಾರ್ತೆಯನ್ನು ತಿಳಿಸಿದ ತರುವಾಯ ಮಕೆದೋನ್ಯ ದೇಶವನ್ನು ಬಿಟ್ಟು ಹೊರಟ ಕಾಲವನ್ನೂ ಅದಕ್ಕೆ ಮುಂಚಿನ ಕಾಲವನ್ನೂ ಈ ವಚನವು ಸೂಚಿಸುತ್ತದೆ. (೧೬. ವ. ೨ಕೊರಿ. ೧೧. ೯.)

7. ಪೌಲನಿಂದ ಅವರು ಹೊಂದಿದ ಆತ್ಮದ ಮೇಲುಗಳಿಗೆ ಪ್ರತಿಯಾಗಿ ಅವನಿಗೆ ಬೇಕಾದ ಶರೀರದ ಮೇಲುಗಳನ್ನು ಮಾಡಿದರು. ಹೀಗೆ ಕೊಳ್ಳ ಕೊಡೋಣಗಳ ವಿಷಯದಲ್ಲಿ ಫಿಲಿಪ್ಪಿ ಸಭೆಯೇ ಹೊರ್ತು, ಬೇರೆ ಸಭೆಗಳು ಸಹಾಯ ಮಾಡಲಿಲ್ಲವೆಂದು ತೋರುತ್ತದೆ. (೧೭. ವ. ೧ ಕೊರಿ. ೯. ೧೧. ಫಿಲೆಮೋ. ೧೮, ೧೯. ವ.)

8. ದೇವರ ಸೇವಕರಿಗೆ ಮಾಡುವ ಸಹಾಯವು ದೇವರಿಗೆ ಸುಗಂಧವಾಸನೆಯಾದ ಕಾಣಿಕೆಯಾಗಿರುತ್ತದೆ. ದೇವರು ಅದಕ್ಕೆ ತಕ್ಕ ಫಲವನ್ನು ಬದಲಾಗಿ ಕೊಡುವನೆಂಬುವದಕ್ಕೆ ಸಂಶಯವಿಲ್ಲ. (೧೯. ವ.)

9. ಶರೀರ ಆತ್ಮಗಳ ಎಲ್ಲಾ ಕೊರತೆಗಳನ್ನು ಕೃಪಾನಿಧಿಯಾದ ದೇವರು ಪರಿಹರಿಸಿ, ಅವರ ಅಪೇಕ್ಷೆಯ ಪ್ರಕಾರವಲ್ಲ, ತನ್ನ ಅಪರಿಮಿತವಾದ ಐಶ್ವರ್ಯದ ಪ್ರಕಾರವೇ ಅವರಿಗೆ ಬೇಕಾದ ಮೇಲುಗಳನ್ನೆಲ್ಲಾ ಅನುಗ್ರಹಿಸುವನು.



೨೧ ಕ್ರಿಸ್ತ ಯೇಸುವಿನಲ್ಲಿರುವ ಪರಿಶುದ್ಧರೆಲ್ಲರನ್ನು ವಂದಿಸಿರಿ. ನನ್ನ ಸಂಗಡ ಇರುವ [1]ಸಹೋದರರು ನಿಮ್ಮನ್ನು
೨೨ ವಂದಿಸುತ್ತಾರೆ. ಪರಿಶುದ್ಧರೆಲ್ಲರು, ಮುಖ್ಯವಾಗಿ [2]ಕೈಸರನ ಮನೆಯವರು, ನಿಮ್ಮನ್ನು ವಂದಿಸುತ್ತಾರೆ.
೨೩ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮ್ಮೆಲ್ಲರ ಸಂಗಡ ಇರಲಿ. ಆಮೆನ್.

---

1. ಪರಮ ತಂದೆಯನ್ನು ಸ್ತುತಿಸಿದ ತರುವಾಯ ಸಹೋದರರಿಗೆ ವಂದನೆ ಹೇಳುತ್ತಾನೆ. ಇವರು ೧. ೧೪; ೨. ೧೯. ವಚನಗಳಲ್ಲಿ ಹೇಳಲ್ಪಟ್ಟ ಸಹೋದರರೆಂದು ತೋರುತ್ತದೆ.

2. ಕ್ರೂರ ಅರಸನಾದ ನೇರೋನನ ಅರಮನೆಯಲ್ಲಿ ಸಹ ಕ್ರೈಸ್ತರಾದ ಭಕ್ತರು ಇದ್ದಾರೆಂದು ಫಿಲಿಪ್ಪಿಯರು ಕೇಳಿದ್ದರಿಂದ ಅವರಿಗೆ ಎಷ್ಟೋ ಸಂತೋಷವೂ ಧೈರ್ಯವೂ ಉಂಟಾಗುವದು. (೧. ೧೩. ವಚನದ ವ್ಯಾಖ್ಯಾನ ನೋಡ ಬೇಕು.)